ಇ) ಇದಕ್ಕಾಗಿ ಬೇಕಾಗಿರುವ ಭೂಮಿ ಎಷ್ಟು?

ಈ) ಬೇಕಾಗಿರುವ ಭೂಮಿಯನ್ನು ರಾಜ್ಯ ಸರ್ಕಾರವು ಮುಫತ್ತಾಗಿ ನೀಡಲು ಒಪ್ಪಿದೆಯೆ?

ಶ್ರೀ ಜೆ.ಹೆಚ್.ಅಶ್ವತ್ಥ್‌ರೆಡ್ಡಿ (ಲೋಕೋಪಯೋಗಿ ಮಂತ್ರಿಗಳು)

ಅ) ಹೌದು

ಆ) ಸಮಿತಿಯ ವರದಿಯನ್ನು ನಿರೀಕ್ಷಿಸಲಾಗಿದೆ.

ಇ) ಸಮಿತಿಯ ವರದಿಯನ್ನು ಅವಲಂಬಿಸಿರುತ್ತದೆ.

ಈ) ಈ ಪ್ರಶ್ನೆಯು ಸಧ್ಯಕ್ಕೆ ಉದ್ಭವಿಸಿಲ್ಲ.

ಬೀದರ್ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಕಾಮಗಾರಿಗಳು

1093 (1695) ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬರಗಾಲ ಪೀಡಿತ ಪ್ರದೇಶವಾದ ಬೀದರ್ ಜಿಲ್ಲೆಯಲ್ಲಿ ಪ್ರಸ್ತುತ ವರ್ಷದಲ್ಲಿ ಸಣ್ಣ ನೀರಾವರಿ ಇಲಾಖೆಯವರು ತೆಗೆದುಕೊಳ್ಳಲಾದ ಕಾಮಗಾರಿಗಳೆಷ್ಟು; ಅವು ಯಾವುವು ; (ತಾಲ್ಲೂಕು ವಿವರ ನೀಡುವುದು)

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು)

ಅ) 1991-92ನೇ ಸಾಲಿನಲ್ಲಿ ಸಣ್ಣ ನೀರಾವರಿ ವಲಯದಲ್ಲಿ 6 ಕಾಮಗಾರಿಗಳನ್ನು ಮತ್ತು ಜಿಲ್ಲಾ ಪರಿಷತ್ ವ್ಯಾಪ್ತಿಯಲ್ಲಿ 14 ಕಾಮಗಾರಿಗಳನ್ನು ಕೈಗೊಂಡಿದೆ. (ತಾಲ್ಲೂಕುವಾರು ವಿವರಗಳನ್ನು ಪ್ರತ್ಯೇಕವಾಗಿ ಲಗತ್ತಿಸಿದೆ.

ಬೀಜರ್ ಜಿಲ್ಲೆಯಲ್ಲಿ ಕೈಗೊಂಡಿರುವ ಸಣ್ಣ ನೀರಾವರಿ ಯೋಜನೆಗಳ ಪಟ್ಟಿ

ಸಣ್ಣ ನೀರಾವರಿ ವಲಯ (ಲಕ್ಷ ರೂ. ಗಳಲ್ಲಿ)

ತಾಲ್ಲೂಕು		ಕಾಮಗಾರಿಗಳ ಕೆಲಸ	ಅಂದಾಜು ವೆಚ್ಚ
ಔರಾದ್	1)	ತೇಗಾಂಪುರ ಹೊಸಕೆರೆ	110.00
-"-	2)	ಒಡೆದು ಹೋದ ಎಕಾಂಬ ಕೆರೆಯ ದುರಸ್ತಿ	20.00
ಬೀದರ್	3)	ಅಲಿಂಬರ್ ಹೊಸಕೆರೆ	22.00
-"-	4)	ಮಾರ್ಕಲ್ ಕೆರೆಯ ಒಡೆದುಹೋದ ದುರಸ್ತಿ	10.00
-"-	5)	ಒಡೆದು ಹೋದ ಜನವಾಡ (ಪಶ್ಚಿಮ) ಕೆರೆಯ ದುರಸ್ತಿ	30.00
-"-	6)	ಬೊಂಪಲ್ಲಿ ಗ್ರಾಮವನ್ನು ಸ್ಥಳಾಂತರಿಸುವುದು	30.00

ಜಿಲ್ಲಾ ಪರಿಷತ್ : ಬೀದರ್			
ಔರಾದ್	1)	ನಂದಿನಾಗುರದ ಬಳಿ ಹೊಸಕೆರೆ	20.00
-"-	2)	ನಾಗಾನಪಲ್ಲಿ ಬಳಿ ಹೊಸಕೆರೆ	12.00
-"-	3)	ಬೆಳ್ಳೂರು ಬಳಿ ಏತ ನೀರಾವರಿ ಯೋಜನೆ	8.00
ಬೀದರ್	4)	ಹೊಕರಾನ "ಬಿ" ಬಳಿ ಹೊಸಕೆರೆ	13.35
-"-	5)	ಕಂಗನಾಕೋಟೆ ಬಳಿ ಹೊಸಕೆರೆ	20.266
-"-	6)	ಜಮಿಾಸ್ತಾನಪುರದ ಬಳಿ ಹೊಸಕೆರೆ	19.87
ಹುಮ್ನಾಬಾದ್	7)	ಫತ್ಮಾಪುರದ ಬಳಿ ಹೊಸಕೆರೆ	17.54
-"-	8)	ಮೊಕ್ಪಾ ಕೆರೆಯ ದುರಸ್ತಿ	6.60
ಬಾಲ್ಕಿ	9)	ಕಳಸದಾಳ್ ಬಳಿ ಹೊಸಕೆರೆ	10.00
-"-	10)	ಜೋಯ್‌ಗಾನ್ ಬಳಿ ಹೊಸಕೆರೆ	15.86
ಬಸವಕಲ್ಯಾಣ	11)	ಅಲ್‌ಗೂಡ್ ಬಳಿ ಹೊಸಕೆರೆ	49.30
-"-	12)	ಹೊನ್ನಾಳಿ ಬಳಿಯ ಹೊಸಕೆರೆ	26.00
-"-	13)	ಸಿರಿಗಾಪುರದ ಬಳಿಯ ಹೊಸಕೆರೆ	18.39
-"-	14)	ಮಿರ್ಕಾಲ್ ಗ್ರಾಮದ ಬಳಿ ಹೊಸಕೆರೆ	15.00

ಜಿಲ್ಲಾ ಪರಿಷತ್‌ಗಳ ಚುನಾವಣೆ ಮುಂದೂಡಿಕೆಗೆ ಕಾರಣ

1095 (1697) ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ) : ಮಾನ್ಯ ಗ್ರಾಮಾಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಲ್ಲಾ ಪರಿಷತ್, ಮಂಡಲ ಪಂಚಾಯಿತಿಗಳ ಚುನಾವಣೆಗಳನ್ನು ಮುಂದೂಡಲು ಕಾರಣವೇನು ;

ಆ) ಈ ಚುನಾವಣೆಗಳನ್ನು ಯಾವಾಗ ನಡೆಸಲಾಗುವುದು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮಾಣಾಭಿವೃದ್ಧಿ ಮತ್ತು ಪಂಚಾಯತ್ ಸಚಿವರು) :

ಅ) ಕಳೆದ ಐದು ವರ್ಷಗಳಲ್ಲಿ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್‌ಗಳ ಕಾರ್ಯ ನಿರ್ವಹಣೆಯು ಅವುಗಳ ಸಾಮರ್ಥ್ಯ ಹಾಗೂ ನ್ಯೂನತೆಗಳನ್ನು ಹೊರತಂದಿದೆ. ಹೀಗೆ ಗಮನಿಸಲಾದ ನ್ಯೂನತೆಗಳನ್ನು ಸರಿಪಡಿಸಲು ಮತ್ತು 72ನೇ ಸಂವಿಧಾನ ತಿದ್ದುಪಡಿಯ ವಿಧೇಯಕದ ಹಿನ್ನೆಯಲ್ಲಿ ಸರ್ಕಾರವು ಈಗಿರುವ ಪಂ.ರಾಜ್ ಕಾಯಿದೆಗೆ ಒಂದು ಸಮಗ್ರ ತಿದ್ದುಪಡಿಯನ್ನು ತರಲು ಉದ್ದೇಶಿಸಿದೆ. ಉದ್ದೇಶಿತ ಸಮಗ್ರ ತಿದ್ದುಪಡಿ ಮಸೂದೆಯು ಜಾರಿಗೆ ಬಂದನಂತರ ಹೊಸ ಕಾಯಿದೆಯ ಉಪಬಂಧಗಳನ್ನು ಅನುಸರಿಸಿ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್ ಕ್ಷೇತ್ರ ವಿಂಗಡಣೆಯನ್ನು ಪುನರ್ ನಿಗಧಿಗೊಳಿಸಲಾಗುವುದು ನಂತರ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್‌ಗಳಿಗೆ ಆದಷ್ಟು ಬೇಗನೇ ಚುನಾವಣೆಗಳನ್ನು ನಡೆಸಲಾಗುವುದು.